doc366
T.P-2

Reg. B G 155

5-9-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52 nd Year of Publication

ವ್ಯವಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್

ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕೇಂದ್ರದಿಂದ ಪರಿಹಾರ ಹಣ ಹೊಂದಬೇಕು

ಪರರಾಷ್ಟ್ರವಲ್ಲಿನ ನಮ್ಮ ಪ್ರದೇಶ

★

ಉತ್ತರ ಬಂಗಾಳಾದ ಕೂಚ್‌ಬಿಹಾರಿನ ಹತ್ತಿರ ಇರುವ ಪ್ರದೇಶಗಳಲ್ಲಿ, ಭಾರತದಲ್ಲಿ ಪಾಕಿಸ್ತಾನ್ ದ್ವೀಪಗಳೂ, ಪಾಕಿಸ್ಥಾನದಲ್ಲಿ ಭಾರತದ ದ್ವೀಪಗಳೂ ಇವೆ. ದೇಶಗಳು ಮಿತ್ರರೂ, ಬಲಶಾಲಿಗಳೂ ಆಗಿದ್ದರೆ ಇತರರ ದೇಶಗಳಲ್ಲಿರುವ ತಮ್ಮ ದ್ವೀಪ ಪ್ರದೇಶಗಳ ಆಡಳಿತ ನಡೆಸುವುದ ಕಷ್ಟವಲ್ಲ.

ಸ್ವಾತಂತ್ರ್ಯಾನಂತರ ಅದಲು ಬದಲು ಮಾಡಿಕೊಳ್ಳುವುದು ಒಂದು ಪ್ರಕೃತಿಯ ಪ್ರವೃತ್ತಿ ಉದ್ಭವಿಸಿ, ಪಾಕಿಸ್ಥಾನವು ತನ್ನ ಪ್ರದೇಶವು ಭಾರತದಲ್ಲಿನದರಲ್ಲಿ ಅರ್ಧಹಷ್ಟಿರುಹದರಿಂದ ಅದಲು ಬದಲಿಗೆ ಒಪ್ಪಿತಾದರೂ, ಭಾರತವು ಪ್ರಾಕೃತವಾಗಿಯೇ ಅಸಹ್ಯವಾಗಿತ್ತು. ಆದಲ್ಲದೆ ಭಾರತ ಪ್ರದೇಶದ ಜನತೆ ಪಾಕಿಸ್ತಾನಕ್ಕೆ ಸೇರಲು ಬಲ್ಲ ಪತ್ರರವಾಗಿ ತಿರಸ್ಕರಿಸುವದು.

ಆದ್ದರಿಂದ, ಪರಿಹರಿಸಲು ಮತ್ತೊಂದು ಸಮಸ್ಯೆ ಉದ್ಭವಿಸಿತು. ಪಾಕಿಸ್ತಾನವು ಇದರ ಪ್ರಯೋಜನ ಪಡೆಯಲು ಅಣಿಯಾಯಿತು. ತನ್ನ ಪ್ರದೇಶಗಳಿಗೆ ಹೋಗಲು ಭಾರತದ ಅನುಮತಿ ಕೇಳಿ ಪಡೆಯಿತು. ಭಾರತ ಸರಕಾರ ತನ್ನ ಪ್ರದೇಶಗಳಿಗೆ ಹೋಗುವದಕ್ಕೆ ಪಾಕಿಸ್ಥಾನವು ಅನುಮತಿ ತಿರಸ್ಕರಿಸಿತು. ಕಡೆಗೆ 1965 ರಲ್ಲಿ ಮೂರು ವಾರಗಳಲ್ಲಿ ಆ ಎಲ್ಲಾ ಪ್ರದೇಶಗಳನ್ನೂ ಆಕ್ರಮಿಸಿತು.

ಪಾಕಿಸ್ತಾನವು ಭಾರತಕ್ಕೆ ಅನುಮತಿ ತಿರಸ್ಕರಿಸಿದೆ. ಈಗ ತನ್ನ ಪ್ರದೇಶಕ್ಕೆ ಭಾರತ ಸರಕಾರ ಹೋಗಬೇಕಾದರೆ ಬಲ ಪ್ರಯೋಗ ಮಾಡಬೇಕಾಗಿದೆ ; ಆದರೆ ಈ ಸಕಾರ ಆ ಮಾರ್ಗಕ್ಕೆ ತೀವ್ರ ವಿರೋಧಿಯಾಗಿದೆ. ಪಾಕಿಸ್ಥಾನಕ್ಕೆ "ಹೊರಟು ಹೋಗು" ಎಂದು ಹೇಳುವಷ್ಟು ಸಾಮರ್ಥ್ಯವನ್ನು ಈ ಸರಕಾರ ಕೂಡಿಸಬಲ್ಲದೇ ?

(ಟ್ರೂತ್‌ದಿಂದ ಅನುವಾದ)

★

ಉಪಾಧ್ಯಾಯರುಗಳಿಗೆ ಪಾರಿತೋಷಕ

ನವದೆಹಲಿ— ಈ ವರ್ಷದ ರಾಷ್ಟ್ರೀಯ ಪಾರಿತೋಷಕಕ್ಕೆ 99 ಉಪಾಧ್ಯಾಯರುಗಳನ್ನು ಆರಿಸಲ್ಪಟ್ಟಿದ್ದಾರೆ – ಈ ಪೈಕಿ ಮೈಸೂರಿನವರು 5 ಮಂದಿ.

★

ರಷ್ಯಾದ ಬೆದರಿಕೆ

ಪ್ರಾಗ್— ವಾರ್ಸಾ ಒಪ್ಪಂದಗಾರರೆಲ್ಲರೂ ಆದ ಹುತ್ತಾತ್ಮರ ಸ್ಮಾರಕವನ್ನು ಜೆಕೊಸ್ಲೊವಿಯನ್ನರು ಹೂವುಗಳಿಂದ ಅಲಂಕರಿಸುತ್ತಿರುವರು ; ಹುತ್ತ ಅಲ್ಲಿ ವಿದ್ಯಾರ್ಥಿಗಳು ಕಪ್ಪು ಬಾವುಟ ಹಿಡಿದು ಎಚ್ಚರಿಕೆಯಿಂದ ಕಾವಲಿರುವರು. ಈ ವಿದ್ಯಾರ್ಥಿಗಳು ತಲ್ಲಿಂದ ಕೂಡಲೇ ಹೊರಟು ಹೋಗಬೇಕೆಂದೂ ತಪ್ಪಿದರೆ ಅಲ್ಲಿಗೆ ಹರಿಸಿ ಎಲ್ಲ ನಿರ್ಮೂಲ ಮಾಡುವಹಾಗಿ ರಷ್ಯಾ ಬೆದರಿಸಿದೆ.

★

ಮಾಯವಾದ ಸಕ್ಕರೆ

ಬೆಂಗಳೂರು— 80 ಮೂಟೆ ಸಕ್ಕರೆ ಇದ್ದ ಒಂದು ಲಾರಿಯು ಆಗಸ್ಟ್ 11 ರಿಂದ ನಾಪತ್ತೆಯಾಗಿರುವ ವಿಷಯವು ವಿಧಾನಸಭೆಯಲ್ಲಿ ಬಂದಿತು ; ಹುಣಸೂರಿನಲ್ಲಿ ತುಂಬಲ್ಪಟ್ಟ ಈ ಸಕ್ಕರೆ ಮೈಸೂರಿನಲ್ಲಿ ಒಂದು ಸಾರಿಗೆ ಸಂಸ್ಥೆಗೆ ಕೊಡಬೇಕಿತ್ತು : ಆದರೆ ಲಾರಿ ಮತ್ತು ಸಕ್ಕರೆ ಮಾಯವಾದವು ; ಇಬ್ಬರು ಸಿಕ್ಕಿರುವರೆಂದೂ, ಲಾರಿ ಪತ್ತೆಯಾಯಿತೆಂದೂ, ಕ್ಲೂರಿ ಮಾಡಿದರೆಷ್ಟು ಸಕ್ಕರೆ ಉಳಿದಿದ್ದನ್ನು ನಗರದ ವರ್ತಕರೊಬ್ಬರಿಗೆ ಮಾರಿರುವುದೆಂದೂ, ಸಾಬೂನ್ದನ್ನು ಸಜ್ಜುಮಾಡುತ್ತಿದೆಯೆಂದೂ ತಿಳಿಸಲಾಯಿತು.

ಪರಿಹಾರಕ್ಕೆ ಕೇಂದ್ರದಿಂದ ಪಡೆಯಬೇಕು

ಬೆಂಗಳೂರು— ಜಿಲ್ಲೆಗಳಲ್ಲಿನ ಅಭಾವ ಪರಿಸ್ಥಿತಿಯನ್ನು ಶಾಸನಸಭೆಯಲ್ಲಿ ಸದಸ್ಯರು ವಿವರಿಸಿದರು – ರಾಜ್ಯದ ಅನೇಕ ಕಡೆ ಇನ್ನೂ ಪರಿಸ್ಥಿತಿ ಇದೆಯೆಂದು ಘೋಷಿಸಲಾಯಿತು – 1.5 ಕೋಟಿ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ಅನಾವೃಷ್ಟಿ ಫಲಕ್ಕೆ ತುತ್ತಾಗಿರುವರೆಂದೂ, ಆದರಲ್ಲೂ ಅತಿ ಸಂಕಷ್ಟಕ್ಕೀಡಾಗಿರುವ 50 ಲಕ್ಷ ಜನರನ್ನು ಕಾಪಾಡಲು ದಿನಕ್ಕೆ ರೂ. 60 ಲಕ್ಷ ಆವಶ್ಯಕವಿದೆಯೆಂದೂ, ಸರಕಾರ ಹಣವಿಲ್ಲವೆಂಬ ಸಬೂಬು ಹೇಳಬಾರದೆಂದೂ ಹೇಳಲಾಯಿತು — ಸರಕಾರವು ಪರಿಹಾರಕ್ಕೆ ಕೇಂದ್ರದಿಂದ ರೂ. 60 ಕೋಟಿ ಪಡೆಯಬೇಕೆಂದೂ ಹೇಳಲಾಯಿತು.

ಚಿನ್ನದ ಬಿಸ್ಕಟ್‌ಗಳ ವಶ

ನವದೆಹಲಿ— ಪಾಲಂ ವಿಮಾನ ನಿಲ್ದಾಣದ ವಿಶ್ರಾಂತಿ ಸ್ಥಳದಲ್ಲಿ ಇಬ್ಬರು ಯುವಕರಿಂದ ಕಸ್ಟಂಸಿನವರು ರೂ: 232500 ಬೆಲೆಯ ಬಿಸ್ಕತ್ತು ರೂಪಗಳಲ್ಲಿದ್ದ ಚಿನ್ನವನ್ನು ವಶಪಡಿಸಿಕೊಂಡರು – ಬ್ರಿಟಿಷ್ ಮತ್ತು ಸ್ವಿಸ್ ಗುರುತು ಇದ್ದಿತು.

ರಕ್ಷಣಾ ವ್ಯವಸ್ಥೆ

ನವದೆಹಲಿ— ಭಾರತದ ರಕ್ಷಣಾ ವ್ಯವಸ್ಥೆ ಆವಶ್ಯಕತೆಯಲ್ಲಿ ರಷ್ಯಾ ಹೇಗೆ ಸಹಾಯ ಮಾಡಬಲ್ಲದೆಂಬ ವಿಷಯದಲ್ಲಿ ಇಲ್ಲಿಗೆ ಭೇಟಿ ಕೊಟ್ಟ ರಷ್ಯಾದ ಜ॥ ಸೇಗೆವಿಕ್ ರೊಡನೆ ಚರ್ಚಿಸಲಾಯಿತೆಂದು ಹೇಳಲಾಗಿದೆ.

ರಿಟ್

ಕಲ್ಕತ್ತಾ—ಅಡ್ವೊಕೆಟ್, ಬ್ಯಾರಿಸ್ಟರ್ ಎಂಬ ಬೇಧ ಹೋಗಬೇಕೆಂದು ಒಂದು ರಿಟ್ ಅರ್ಜಿಯನ್ನು ಹೈಕೋರ್ಟಿನಲ್ಲಿ ಹಾಕಲಾಗಿದೆ – ಅಡ್ವೊಕೇಟ್ ಆಗಿ ಸಂಬಂಧಪಟ್ಟವರಿಗೆಲ್ಲಾ ನೋಟೀಸ್ ಆರ್ಡರ್ ಆಗಿದೆ.

ಪುಡ್‌ಲಾಂಡ್ ಜನವರಿಯ 4 ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಫರ್ಸ್ಟ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಬಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾದವರ

ಸಂಗೀತ — ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೆರ— 30-8-68 ರಿಂದ

ಚಿತ್ತಾಕರ್ಷಕ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ

ಪಾತ್ರ– ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

ಸಮಸ್ಯೆ

ಯಾವ ಆಹಾರ ಪಾನೀಯವನ್ನು ಆಯ್ಕೆ ಮಾಡಬೇಕು

ನೀವು ಪರಿಪೂರ್ಣ ಶಕ್ತಿವರ್ಧಕ ಆಹಾರವಾಗಿರುವ

ಕೋಕೋಮಾಲ್ಟೀನ್

ಏಕೆ ಆಯ್ಕೆಮಾಡಬೇಕೆಂಬುದಕ್ಕೆ

5 ಕಾರಣಗಳು ಇಲ್ಲಿವೆ

ಉತ್ತಮ ಆಹಾರ ಮೌಲ್ಯ

ಬಾರ್ಲಿ ಮಾಲ್ಟ್ ಎಕ್ಸ್‌ಟ್ರಾಕ್ಟ್, ಪೂರ್ಣ ಕೆನೆಯ ಹಾಲು, ಗ್ಲುಕೋಸ್ ಮತ್ತು ಕೋಕೋದಿಂದ ತಯಾರಿಸಿರುವ ಕೋಕೋ ಮಾಲ್ಟೀನ್‌ನಲ್ಲಿ ಪ್ರೊಟೀನ್‌ಗಳು, ಶರ್ಕರ ಪಿಷ್ಟಗಳು, ಖನಿಜ ಲವಣಗಳು ಮತ್ತು ವಿಟಮಿನ್‌ಗಳು ಸಮೃದ್ಧವಾಗಿವೆ.

ಉತ್ತಮ ರುಚಿ

ಪುಷ್ಟಿಕರ ಅಂಶಗಳನ್ನು ಕೌಶಲ್ಯದಿಂದ ಬೆರೆಸಿರುವುದರಿಂದ ಮತ್ತು ಕೋಕೋವನ್ನು ಹೆಚ್ಚಿಗೆ ಸಂಪಡಿಸಿರುವುದರಿಂದ ಕೋಕೋ ಮಾಲ್ಟೀನ್‌ಗೆ ಒಂದು ವಿಶೇಷ ರುಚಿಯಿದೆ.

ಉತ್ತಮ ಪರಿಮಳ

ಶುದ್ಧ ಬೆಣ್ಣೆ, ಜೇನು ಹಾಗೂ ಪುಷ್ಟಿಕರ ಕೋಕೋದಿಂದಾಗಿ ಕೋಕೋ ಮಾಲ್ಟೀನ್ ಒಂದು ಆಹ್ಲಾದಕರ, ಚೈತನ್ಯಕರ ಪಾನೀಯವಾಗಿದೆ.

ಹೆಚ್ಚು ಮಿತವ್ಯಯಕರ

ಒಂದು ಕಪ್ ಹಾಲಿನಲ್ಲಿ ಕೇವಲ ಒಂದು (ಮಕ್ಕಳಿಗೆ ಅರ್ಧ) ಚಾಚಮಜೆ ಕೋಕೋ ಮಾಲ್ಟೀನ್ ಸೇರಿಸಿದರೆ ನಮಗೆ ಉತ್ತಮ ಪುನಶ್ಚೈತನ್ಯದಾಯಕ ಹಾಗೂ ಶಕ್ತಿವರ್ಧಕ ಆಹಾರ ಪಾನೀಯ ದೊರೆಯುವುದು.

ಆರೋಗ್ಯಕರ

ಪುಷ್ಟಿಕರ ಕೋಕೋ ಮಾಲ್ಟೀನ್ ಅದರ್ಶನೀಯ ಸಾರ್ವಕಾಲಿಕ

ಕುಟುಂಬದ ಪಾನೀಯ

ಇದೀಗ ಕುಟುಂಬಕ್ಕೆ ಆಹಾರ ಪಾನೀಯ

ಬಿಸಿ ಅಥವಾ ತಂಪಿರುವ **ಕೋಕೋ ಮಾಲ್ಟೀನ್ ಶ್ರೇಷ್ಠ**

ಕೋಕೋ ಮಾಲ್ಟೀನ್ ಲ್ಯಾಬರೇಟರೀಸ್ : ಮಾಲಿಕರು:ಟ್ರೇಡ್ ಲಿಂಕ್ಸ್ ಪ್ರೈ. ಲಿಮಿ., 46, ಪೂನಾ ರೋಡ್, ನವ ದೆಹಲಿ

ವಿಭಾಗದ ಮಾರಾಟ ಕಛೇರಿ : 20 ಆಂಡ್ರ್ಯೂ ರೋಡ್, ಶಾಂತಿ ನಗರ, ಬೆಂಗಳೂರು 27.

TL-NP-457KAN

ದಿವ್ಯವಾಣಿ

ಜೂಜು ದುರಾಶೆಯ ಮಗು, ದುಂದು ಗಾರಿಕೆಯ ತಂದೆತಾಯಿ. — ಕಾರ್ಟ್

★

ಗಣೇಶೋತ್ಸವ

ಹೊಂಗನೂರು ಶಾಖಾ ಶಾಸ್ತ್ರಧರ್ಮ ಪ್ರಚಾರ ಸಭೆಯವರು 27-8-68 ರಂದು ಗೌಹರ ಬೀಡಿ ಶ್ರೀರಾಮಮಂದಿರದಲ್ಲಿ ಶ್ರೀ ಗಣೇಶೋತ್ಸವವನ್ನು ನೆರವೇರಿಸಿದರು. ಶ್ರೀ ಟಿ ಡಿ ರಂಗೇಗೌಡರು ಸೇವೆಯ ಖರ್ಚನ್ನು ವಹಿಸಿದ್ದರು.

SHAKTI SUDHA

A Superb Tonic

Edited, Printed & Published by Dharmapracharа Nirata M S Krishna Rao (Proprietor) at the Satyavadi Press Chamarajapuram, Mysore 4

ಚುನಾವಣೆ ವಿಷಯ

ಉಟೆಕಮಂಡ್ — ಚುನಾವಣೆ ಕಾಲದಲ್ಲಿ ಬಲಹೀನ ಮತದಾರರನ್ನು ವೋಟು ಕೊಡಲು ಹೋಗದಂತೆ, ಬಂಡೂಕ ತುಪಾಕಿಗಳಿಂದ ಹೆದರಿಸಲಾಗುವುದೆಂದು, ಪಾರ್ಲಿಮೆಂಟಿನ ಸದಸ್ಯರು ಹೂರಿತ್ತಿರುವರೆಂದೂ, ಹೀಗೆ ಹಲವು ರಾಜ್ಯಗಳಿಂದ ದೂರು ಬಂದಿರುವುದೆಂದೂ ಚೀಫ್ ಎಲೆಕ್ಷನ್ ಆಫೀಸರ್ ಶ್ರೀ ಸೇನರವರು ಚುನಾವಣಾ ಅಧಿಕಾರಿಗಳಿಗೆ ತಿಳಿಸಿದರು — ಇದಕ್ಕೆ ಪರಿಹಾರವಾಗಿ ಚುನಾವಣೆಗೆ ಮುಂಚೆ ಮತ್ತು ನಂತರ ಕೆಲವು ದಿನಗಳು ಬಂದೂಕ ಲೈಸೆನ್ಸಿನವರು ಅವುಗಳನ್ನು ಜಿಲ್ಲಾಧಿಕಾರಿಗಳಲ್ಲಿ ಇಟ್ಟಿರಬೇಕೆಂದು ಬಂದಿರುವ ಸಲಹೆಯನ್ನು ಪರ್ಯಾಲೋಚಿಸಬೇಕೆಂದೂ ಹೇಳಿದರು.

ಲೈಬ್ರರಿಗಳು

ನವದೆಹಲಿ— ದೇಶದಾದ್ಯಂತ ಲೈಬ್ರರಿಗಳನ್ನು ಸ್ಥಾಪಿಸಲು ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನ್ಯಾಷನಲ್ ಬುಕ್ ಟ್ರಸ್ಟಿನವರು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದ್ದಾರೆ.

★

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಸ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟ್ಯಾಕೀಸಿನವರು, ಪದ್ಮಭೂಷಣ ಕ್ಷೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಡೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ‘ಸತ್ಯವಾದಿ’
ಚಾಮರಾಜಪುರಂ, ಮೈಸೂರು 4.